ಎಂತಹ ಮುದ್ದಾದ ಬೆಕ್ಕು, ದೇವಸ್ಥಾನದ ಮುಂದೆ ಕುಳಿತ ಆಕರ್ಷಕ ಭಂಗಿ, ಅಪರೂಪದ ದೃಶ್ಯ. ಬೇರೆ ದಿನಗಳಲ್ಲಾದರೆ ಫೋಟೊ ತೆಗೆದುಕೊಳ್ಳುತ್ತಿದ್ದೆ. ಇಂದು ಮನ ತಳಮಳಿಸುತ್ತಿದೆ. ಆದರೂ... ಗರುಡಗಂಬದ ಬಳಿ ನಿಂತು ಕೈಮುಗಿದೆ. ಬೆಕ್ಕು ಅಡ್ಡ ಹಾಯುವುದಿಲ್ಲವೆಂದು ಖಾತ್ರಿಯಾದಾಗ ತಟ್ಟನೆ ಒಳಸಾಗಿದೆ. ಬೇಡಿದ್ದು ಅದೇ. ಅಪರಾಧಿ ಮನೋಭಾವದಿಂದ ಬೇಯುತ್ತ 'ನನ್ನ ಕೆಲಸ ಮಾಡಿಕೊಡು ದೇವಾ' ಎಂದೆ. ಮುಂದೆ ದೇವರನ್ನು ನೋಡುವ, ಕೇಳುವ, ಧೈರ್ಯವಾಗಲಿಲ್ಲ. ಪ್ರದಕ್ಷಿಣೆ ಬಂದರೂ ತೀರ್ಥವನ್ನೂ ತೆಗೆದುಕೊಳ್ಳದೇ ಮಿಡುಕುತ್ತ ಹೊರಬಿದ್ದೆ.

ಎಂಥ ಅಕಾರ್ಯ ಎಂದಿರಾ? ನಿಲ್ಲಿ, ಅವಸರಿಸಬೇಡಿ. ಒಗಟು ಮಾತನಾಡಿ ನಿಮ್ಮನ್ನು ಪತ್ತೇದಾರಿ ಕಥೆಯಂತೆ ಸಂಶಯದ ಸುಳಿಯಲ್ಲಿ ಇರಿಸುವುದಿಲ್ಲ. ನಿಧಾನವಾಗಿ ಎಲ್ಲ ಹೇಳುತ್ತ ಹೋಗುತ್ತೇನೆ. ಎಂದರೆ ನನ್ನ ಅಸಹಾಯಕತೆಯನ್ನು, ಕೃತ್ಯದ ಅನಿವಾರ್ಯತೆಯನ್ನು ನೀವು ಅರ್ಥ ಮಾಡಿಕೊಳ್ಳಬಹುದು ಎಂಬ ದೂರದ ಆಸೆ. ನಾನೇನೂ ಅಷ್ಟು ಕೆಟ್ಟವನಲ್ಲವೆಂದು ತೋರಿಸಿಕೊಳ್ಳುವ, ನಿರಪರಾಧಿತ್ವವನ್ನು ಸಾಬೀತು ಪಡಿಸುವ ಭಾವ. ಪರಿಸ್ಥಿತಿಯೇ ಹಾಗೆ ಸುರುಳಿ ಸುತ್ತಿಕೊಂಡು ಕುತ್ತಿಗೆಗೆ ಬಂದು ನನ್ನನ್ನು ಅಪರಾಧಕ್ಕೆ ಮನಸ್ಸು ಮಾಡುವ ಸಂದರ್ಭ ಸೃಷ್ಟಿಸಿತ್ತು. ಇಲ್ಲದಿದ್ದರೆ ನನ್ನ ಹೆತ್ತವ್ವನಿಗೆ, ಒಡಹುಟ್ಟಿದವರಿಗೆ ಮೋಸ ಮಾಡುವ ಯೋಚನೆಯೂ ನನ್ನ ಬಳಿ ಸುಳಿಯುತ್ತಿರಲಿಲ್ಲ. ಹಾಳಾದ ಸಾಲದ ಬಾಧೆ ಶೂಲದಂತೆ ಚುಚ್ಚುತ್ತಿದೆ. ಅಪ್ಪ ಇರುವವರೆಗೆ ಅಪ್ಪನ ಮುಖ ನೋಡಿಕೊಂಡು ಸುಮ್ಮನಿದ್ದವರು ಅಪ್ಪ ಹೋದಾಕ್ಷಣ ಬೆನ್ನಟ್ಟಿ ಇರಿಯುತ್ತಿದ್ದಾರೆ. ವ್ಯವಹಾರ ಬೆಳೆಸಲೆಂದು, ಹಳೆಯ ಸಾಲ ತೀರಿಸಲೆಂದು, ಹೆಂಡತಿಯ ಬಯಕೆಗಳ ಈಡೇರಿಕೆಗೆ, ಅಪ್ಪನ ಕರ್ಮಾಂತರಗಳಿಗೆ, ಮಕ್ಕಳ ಡೊನೇಷನ್... ಹೀಗೆ ನಾನಾ ಕಾರಣಗಳಿಗೆ ಸಾಲ ಮಾಡಿದೆ. ಹಾಗೆಂದು ನನಗಾಗಿ ಏನೂ ಕೊಂಡಿಲ್ಲ. ಡ್ರಿಂಕ್ಸ್ ಬಿಡಿ, ಒಂದು ಸಿಗರೇಟು, ಗುಟ್ಕಾದ ಚಟವೂ ನನಗಿಲ್ಲ. ಆದರೆ ಈ ಬಾಳು... ಸಂಸಾರವೆಂಬ ರಥ... ಸಾಗಬೇಕಲ್ಲ. ಮುದ್ದಾದ ಎರಡು ಮಕ್ಕಳಿಗಾಗಿ ಮನಸ್ಸು ಗಟ್ಟಿ ಮಾಡಿಕೊಂಡು ಕಾರ್ಯಪ್ರವೃತ್ತನಾಗಿದ್ದೆ.

ಅವ್ವ ಕೂಡ ಗಟ್ಟಿ ಕುಳವೇ. ಅತ್ತಿಗೆ, ನಾದಿನಿಯರ ಮಧ್ಯೆ ನೋವುಂಡು ಪಳಗಿದವಳು. ನಾನು ಕಾಗದ ಪತ್ರ ಮುಂದೆ ಹಿಡಿದಾಕ್ಷಣ ಸಹಿ ಮಾಡಿಬಿಡುತ್ತಾಳಾ? ಉಹ್ಞೂಂ, ಬೇರೇನಾರೂ ಉಪಾಯ ಮಾಡಬೇಕು. ಅವಳು ತಾನಾಗೇ ಸಹಿ ಮಾಡುವಂತೆ... ಮನೆ ಬರೆದು ಕೊಡುವಂತೆ ತಂತ್ರ ಹೂಡಬೇಕು. ಹೇಗೆ... ಏನು ಜಾದೂ ಮಾಡುವುದೆಂದು ಎರಡು ದಿನ ತಲೆ ಕೆಡಿಸಿಕೊಂಡೆ. ಯಾರಿಗೂ ಹೇಳುವ ಹಾಗಿಲ್ಲ. ಗೊತ್ತಾದರೆ ಗಲಾಟೆಯಾಗುತ್ತದೆ. ಕೊನೆಗೆ ಹೊಳೆದ ಉಪಾಯವನ್ನು ಕಾರ್ಯರೂಪಕ್ಕಿಳಿಸಿದೆ. ಅವ್ವ ಮೊದಲಿನಿಂದಲೂ ಈಶ್ವರನ ಭಕ್ತೆ. ಬಾಯಲ್ಲಿ ಸದಾ 'ಶಂಭೋ ಶಂಕರ, ಹರಹರ ಮಹಾದೇವ' ನಲಿಯುತ್ತಿದ್ದ. ಶಿವರಾತ್ರಿ ಖಟ್ಟಾ ಉಪವಾಸ. ಶ್ರಾವಣ ಸೋಮವಾರ, ಪ್ರದೋಷ ಎಲ್ಲ ಪಾಲಿಸುತ್ತಿದ್ದಳು. ಈಗೀಗ ಯಾವುದೂ ಆಗದೇ ಬರೀ ನಾಮಸ್ಮರಣೆಯೊಂದೇ ಉಳಿದಿತ್ತು. ಕಳೆದ ಬಾರಿ ಗಣೇಶನ ಹಬ್ಬದಲ್ಲಿ 'ಗಣೇಶನ ಮಹಿಮೆ' ನಾಟಕವಾಡಿದಾಗ ನಾನು ನಾರದನಾದರೆ ಗೆಳೆಯ ಜಗ್ಗು ಈಶ್ವರನಾಗಿದ್ದ. ಸಮಯದ ಅಭಾವದ ಕಾರಣ ಅವನ ಮೇಕಪ್ಪಿಗೆ ನಾನೇ ಸಹಾಯ ಮಾಡಿದ್ದೆ. ಸಕಾಲಕ್ಕೆ ವೇಷಭೂಷಣಗಳು ಬಾಡಿಗೆಗೆ ದೊರೆಯಲಿಲ್ಲವೆಂದು ಅವನು ಕೊಂಡೇ ಬಿಟ್ಟಿದ್ದ. ಈಗ ನಾನೇ... ಈಶ್ವರನಾಗಿ... ಅಂದರೆ ವೇಷಧಾರಿಯಾಗಿ ಅವಳನ್ನು ಒಲೈಸಬೇಕು. ಅವಳ ಆರಾಧ್ಯ ದೈವ